2017 ಕ.ತೀ.ವ. 1070

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ

### ಆರ್. ಉಮೇಶಪ್ಪ ಮತ್ತು ಇನ್ನೊಬ್ಬರು –ವಿರುದ್ಧ– ಕರ್ನಾಟಕ ರಾಜ್ಯ*

ದಂಡ ಪ್ರಕ್ರಿಯಾ ಸಂಹಿತೆ ಕಲಂ 397ರಡಿಯಲ್ಲಿ ಕ್ರಿಮಿನಲ್ ಪರಿಷ್ಕರಣಾ ಅರ್ಜಿ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 482ರಡಿಯಲ್ಲಿ ಕ್ರಿಮಿನಲ್ ಅರ್ಜಿ.

ಕ್ರಿಮಿನಲ್ ಪ್ರಕರಣದಲ್ಲಿ ಎದುರುದಾರರು ಜಪ್ತಿ ಮಾಡಿರುವ ವಸ್ತುಗಳನ್ನು ಬಿಡುಗಡೆಗೊಳಿಸುವಂತೆ ನಿರ್ದೇಶನ ಕೋರಿ ಸದರಿ ಪರಿಷ್ಕರಣಾ ಅರ್ಜಿ.

ಅಧಿವಿಚಾರಣಾ ನ್ಯಾಯಾಲಯದಲ್ಲಿ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988ರ 13(2)ರ ಪ್ರಕರಣಗಳ ಜೊತೆಗೋದಿದಂತೆ ಕಲಂ 13(1)(ಇ)ರಡಿಯಲ್ಲಿ ಶಿಕ್ಷಾರ್ಹವಾದ ಪ್ರಕರಣವನ್ನು ದಾಖಲಿಸಿದ ಕ್ರಿಮಿನಲ್ ನಡಾವಳಿಗಳನ್ನು ರದ್ದುಗೊಳಿಸುವಂತೆ ಕ್ರಿಮಿನಲ್ ಅರ್ಜಿ.

ಪ್ರಕರಣವು ತನಿಖಾ ಹಂತದಲ್ಲಿರುವುದರಿಂದ ಪರಿಷ್ಕರಣಾ ಅರ್ಜಿಯು ಅಕಾಲಿಕವೆಂದು ವಜಾಗೊಳ್ಳಲ್ಪಟ್ಟಿದೆ. ಎದುರುದಾರರು ಮಾಡಿರುವ ಶೋಧ ಕಾರ್ಯ ಮತ್ತು ಜಪ್ತಿಯು ಎಫ್ಐಆರ್ ದಾಖಲಿಸುವ ಮುನ್ನ ಮಾಡಿದ ಕ್ರಮವು ಕಾನೂನುಬಾಹಿರ ಮತ್ತು ಅನುಮತಿಸಲಾಗದು ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಕ್ರಿಮಿನಲ್ ಅರ್ಜಿಯನ್ನು ಪುರಸ್ಕರಿಸಿದೆ.

---

* ಕ್ರಿಮಿನಲ್ ಪರಿಷ್ಕರಣಾ ಅರ್ಜಿ ಸಂಖ್ಯೆ.: 1227/2016, ಇದರೊಂದಿಗೆ ಇತರೆ, ದಿನಾಂಕ: 24ನೇ ಜನವರಿ, 2017.

***ಉಲ್ಲೇಖಿಸಲಾದ ಮೊಕದ್ದಮೆ:*** **ಪ್ಯಾರಾದಲ್ಲಿ**

*1. ಎಐಆರ್ 2014 ಎಸ್‌ಸಿ 187*
*ಲಲಿತ ಕುಮಾರಿ -ವಿರುದ್ಧ- ಉತ್ತರ ಪ್ರದೇಶ ಸರ್ಕಾರ (ಉಲ್ಲೇ) 3*

ಅರ್ಜಿದಾರರ ಪರ : ಶ್ರೀ ನಿತಿನ್ ಆರ್, ವಕೀಲರು.
ಪ್ರತ್ಯರ್ಜಿದಾರರ ಪರ : ಶ್ರೀ ವೆಂಕಟೇಶ್ ಎಸ್. ಅರಬಟ್ಟಿ,
ವಿಶೇಷ ಸರ್ಕಾರಿ ಪ್ರಾಸಿಕ್ಯೂಟರ್.

**ಆಜ್ಞೆ**

**ನ್ಯಾಯಮೂರ್ತಿ ಆನಂದ್ ಬೈರಾರೆಡ್ಡಿ** :

ಈ ಅರ್ಜಿಗಳು ಪರಸ್ಪರ ಸಂಬಂಧಿತವಾಗಿರುವುದರಿಂದ ಇವರುಗಳನ್ನು ಒಟ್ಟಿಗೆ ಸುನಾವಣೆ ನಡೆಸಿದ್ದು, ವಿಲೆ ಮಾಡಲಾಗಿದೆ.

ಕ್ರಿಮಿನಲ್ ಪರಿಷ್ಕರಣಾ ಅಪೀಲು.1227/2016ರಲ್ಲಿ:

ಮೊದಲನೇ ಅರ್ಜಿದಾರರು ತುಮಕೂರಿನ ಸಣ್ಣ ನೀರಾವರಿ ವಿಭಾಗದಲ್ಲಿ ಕಾರ್ಯನಿರ್ವಾಹಕ ಅಭಿಯಂತರರಾಗಿರುವುದಾಗಿ ಹೇಳಲಾಗಿದೆ ಮತ್ತು ಅವರು ತುಮಕೂರಿನ ನಿವಾಸಿಯಾಗಿದ್ದಾರೆ. ಎರಡನೇ ಅರ್ಜಿದಾರರು ಮೊದಲನೇ ಅರ್ಜಿದಾರರ ಮಗಳಾಗಿದ್ದು, ಬೆಂಗಳೂರಿನ ನಿವಾಸಿಯಾಗಿದ್ದಾರೆ.

1ನೇ ಅರ್ಜಿದಾರ ಮತ್ತು ಇನ್ನೊಬ್ಬರ ವಿರುದ್ಧ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988ರ (ಇನ್ನು ಮುಂದೆ ಸಂಕ್ಷಿಪ್ತವಾಗಿ 'ಪಿಸಿ ಅಧಿನಿಯಮ' ಎಂದು ಉಲ್ಲೇಖಿಸಲಾಗಿದೆ) 13ನೇ ಪ್ರಕರಣದೊಂದಿಗೆ ಓದಲಾದ 7, 13(1)(ಡಿ) ಪ್ರಕರಣಗಳಡಿ ಶಿಕ್ಷಾರ್ಹವಾದ ಅಪರಾಧಕ್ಕಾಗಿ ಅಪರಾಧ ಸಂಖ್ಯೆ.1/2016ರಲ್ಲಿ

ವಿಶೇಷ ನ್ಯಾಯಾಧೀಶರ ನ್ಯಾಯಾಲಯದ ಮುಂದೆ ತುಮಕೂರಿನ ಲೋಕಾಯುಕ್ತ ಪೊಲೀಸರು ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸಿದ್ದಾರೆಂದು ತಿಳಿದುಬರುತ್ತದೆ. ಅವರನ್ನು ಬಂಧಿಸಿ ವಶಕ್ಕೆ ತೆಗೆದುಕೊಂಡಿದ್ದು, ಅದೇ ಸಮಯದಲ್ಲಿ, ಅವರ ಮನೆಯನ್ನು ಶೋಧಿಸಲಾಗಿದೆಯೆಂದು ಹೇಳಲಾಗಿದೆ. ಇದು 16.1.2016ರಂದು ಮಧ್ಯಾಹ್ನ 2:30 ಮತ್ತು ರಾತ್ರಿ 8:00 ಗಂಟೆಯ ನಡುವೆ ನಡೆದಿರುತ್ತದೆ.

ಈತನ ಗೊತ್ತಿರುವ ಆದಾಯ ಮೂಲಗಳಿಗೆ ಅಸಮ ಪ್ರಮಾಣದ ಸಂಪತ್ತನ್ನು ಕೂಡಿಟ್ಟಿದ್ದಾನೆಂದು ಆಪಾದಿಸಿ, 1ನೇ ಅರ್ಜಿದಾರನ ವಿರುದ್ಧ 4.2.2016ರಂದು ಪಿ.ಸಿ. ಅಧಿನಿಯಮದ 13(2)ನೇ ಪ್ರಕರಣದೊಂದಿಗೆ ಓದಲಾದ 13(1)(ಇ) ಪ್ರಕರಣದಡಿ ಅಪರಾಧಕ್ಕಾಗಿ, ತುಮಕೂರಿನ ಲೋಕಾಯುಕ್ತದ ಪೊಲೀಸ್ ಉಪ–ಅಧೀಕ್ಷಕರು ಸಲ್ಲಿಸಿದ ಮೂಲವರದಿಯ ಆಧಾರದ ಮೇಲೆ, ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿರುವುದಾಗಿ ಹೇಳಲಾಗಿದೆ. ಶೋಧಕಾರ್ಯದ ಅವಧಿಯಲ್ಲಿ ನಗದು ಹಣ ಸೇರಿದಂತೆ ಅನೇಕ ಅಮೂಲ್ಯ ವಸ್ತುಗಳು ಹಾಗೂ ಆಸ್ತಿಯನ್ನು ವಶಪಡಿಸಿಕೊಂಡಿರುವುದಾಗಿ ಹೇಳಲಾಗಿರುತ್ತದೆ. ಪ್ರಕರಣವು ಇನ್ನೂ ತನಿಖೆಯಲ್ಲಿದೆಯೆಂದು ಹೇಳಲಾಗಿದೆ.

1ನೇ ಅರ್ಜಿದಾರನ ನಿವಾಸದಲ್ಲಿ ಸ್ವತ್ತುಗಳನ್ನು ವಶಪಡಿಸಿಕೊಂಡಿದ್ದನ್ನು ಹೊರತುಪಡಿಸಿ, 2ನೇ ಅರ್ಜಿದಾರಳಿಂದ ಮತ್ತು 1ನೇ ಅರ್ಜಿದಾರನ ಸಂಬಂಧಿಯಾದ ಶ್ರೀಕಾಂತ್ ಎಂಬುವರಿಂದ ಮೌಲ್ಯಯುತ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆಯೆಂದು ಹೇಳಲಾಗಿದೆ.

ಅರ್ಜಿದಾರರು ತಮ್ಮ ಕುಟುಂಬದ ಇತರ ಸದಸ್ಯರಿಗೆ ಸೇರಿರುವುದಾಗಿ ತಿಳಿಸಿದ ಬೆಲೆಬಾಳುವ ವಸ್ತುಗಳು ಮತ್ತು ನಗದು ಹಣದ ಅನೇಕ ಬಾಬ್ತುಗಳ ನಿಜ ಮಾಲೀಕತ್ವದ ವಿಸ್ತೃತ ವಿವರಗಳನ್ನು ಒದಗಿಸಿದ ನಂತರ, ವಶಪಡಿಸಿಕೊಂಡ ಸ್ವತ್ತಿನ ಬಿಡುಗಡೆಯನ್ನು ಕೋರಿ, ಕೆಳ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿದ್ದು, ಕೆಳ ನ್ಯಾಯಾಲಯವು ಆ ಅರ್ಜಿಯನ್ನು ತಿರಸ್ಕರಿಸಿರುವುದರಿಂದ ಈಗಿನ ಅರ್ಜಿಯನ್ನು ಸಲ್ಲಿಸಲಾಗಿದೆ.

2. ವಶಪಡಿಸಿಕೊಳ್ಳಲಾದ ಸ್ವತ್ತುಗಳು ಆಪಾದಿತನಿಗೆ ಸೇರಿದ ಸ್ವತ್ತುಗಳೆಂದು ಪರಿಗಣಿಸಲಾಗದೆಂದು ಮತ್ತು ಅವುಗಳನ್ನು ನಿಜ ಮಾಲೀಕರಿಗೆ ಅನುಕೂಲವಾಗುವಂತೆ ಬಿಡುಗಡೆ ಮಾಡಬೇಕೆಂದು ನಿರೂಪಿಸಲು ಕೆಳ ನ್ಯಾಯಾಲಯದ ಮುಂದೆ ಸಾಕಷ್ಟು ಸಾಕ್ಷ್ಯಾಧಾರಗಳನ್ನು ಅರ್ಜಿದಾರರು ಮಂಡಿಸಿರುವ ಕಾರಣದಿಂದಾಗಿ, ಕೆಳ ನ್ಯಾಯಾಲಯವು, ತನಿಖೆ ಇನ್ನೂ ಪೂರ್ಣಗೊಳ್ಳಬೇಕಿದೆ. ಹೀಗಾಗಿ, ವಸ್ತುಗಳ ಬಿಡುಗಡೆಗಾಗಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲಾಗದೆಂದು ತೀರ್ಮಾನಿಸಿದ್ದು, ಇದರಿಂದ ಅತೀವ ನ್ಯಾಯವಿಫಲತೆ ಉಂಟಾಗಿರುತ್ತದೆ. ಆದ್ದರಿಂದ, ಈ ನ್ಯಾಯಾಲಯದ ಮಧ್ಯಪ್ರವೇಶವನ್ನು ಕೋರಲಾಗಿದೆಯೆಂದು ಮಾನ್ಯ ವಕೀಲರು ವಾದಿಸಿದ್ದಾರೆ.

ಕ್ರಿಮಿನಲ್ ಪರಿಷ್ಕರಣಾ ಅರ್ಜಿ: 6883/2016ರಲ್ಲಿ:

ಅರ್ಜಿದಾರನು ಈ ಅರ್ಜಿಗಳಿಗಿಂತ ಮೊದಲೂ ಸಹ 1ನೇ ಅರ್ಜಿದಾರನಾಗಿದ್ದಾನೆ. ಈಗಾಗಲೇ ಹೇಳಿರುವಂತೆ ಅಧಿನಿಯಮದ 13(2)ನೇ ಪ್ರಕರಣದೊಂದಿಗೆ ಓದಲಾದ 13(1)(ಇ) ಪ್ರಕರಣದಡಿ ದಂಡನೀಯ ಅಪರಾಧಕ್ಕಾಗಿ ಅರ್ಜಿದಾರನ ವಿರುದ್ಧ ಅಪರಾಧ ಸಂಖ್ಯೆ 1/2016ರಲ್ಲಿ ಮೊಕದ್ದಮೆ ದಾಖಲಾಗಿರುತ್ತದೆ ಮತ್ತು ಅಪರಾಧದಲ್ಲಿ ಸಿಕ್ಕಿಸುವ ಸಾಕ್ಷ್ಯಾಧಾರಗಳೆಂದು ತಾತ್ಪರ್ಯವಾಗುವ ವಸ್ತುಗಳನ್ನು ವಶಪಡಿಸಿಕೊಂಡ ನಂತರ, ಅದನ್ನು ಅಪರಾಧ ಸಂ.3/2016ರಲ್ಲಿ ಪ್ರತ್ಯೇಕವಾಗಿ ದಾಖಲಾದ ಪ್ರಕರಣದ ದಾಖಲೆಗೆ ವರ್ಗಾಯಿಸಲಾಗಿರುತ್ತದೆ. ಇದು ದಾಖಲಾದ ಎರಡನೇ ಪ್ರಕರಣದ ಸಮರ್ಥನೀಯತೆಯಾಗಿದೆ. ಅಂದರೆ, ಇದು ಈ ಅರ್ಜಿಗಳಲ್ಲಿ ಎರಡನೆಯದರ ವಸ್ತುವಿಷಯವಾಗಿದೆ.

ಅಪರಾಧ ಸಂಖ್ಯೆ: 1/2016ರಲ್ಲಿ (ಪಿ.ಸಿ. ಅಧಿನಿಯಮದ 13(2)ನೇ ಪ್ರಕರಣದೊಂದಿಗೆ ಓದಲಾದ 7, 13(1)(ಡಿ) ಪ್ರಕರಣಗಳಡಿ ದಂಡನೀಯ ಅಪರಾಧಕ್ಕಾಗಿ) ಮೊದಲನೇ ಪ್ರಕರಣಕ್ಕೆ ಸಂಬಂಧಿಸಿದ ವ್ಯವಹರಣೆಗಳ ಅವಧಿಯಲ್ಲಿ ನಡೆಸಲಾದ ಶೋಧನೆ ಮತ್ತು ಅಭಿಗ್ರಹಣವನ್ನು ಅನುಸರಿಸಿ, ಕಲೆಹಾಕಿದ

ಆಪಾದಿಸಲಾದ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಎರಡನೇ ಪ್ರಕರಣವನ್ನು ದಾಖಲಿಸಲಾಗಿದೆಯೆಂದು ವಾದಿಸಲಾಗಿದೆ. ಅದರಲ್ಲಿನ ಅಭಿಗ್ರಹಣವನ್ನು, ಅಪರಾಧ ಸಂಖ್ಯೆ 3/2016 (ಪಿ.ಸಿ. ಅಧಿನಿಯಮದ 13(2)ನೇ ಪ್ರಕರಣದೊಂದಿಗೆ ಓದಲಾದ 13(1)(ಇ) ಪ್ರಕರಣದಡಿ ದಂಡನೀಯ ಅಪರಾಧಕ್ಕಾಗಿ) ಎರಡನೇ ಪ್ರಕರಣಕ್ಕೆ ಸಂಬಂಧಿಸಿ, ಕಾನೂನಿನ ಯಾವುದೇ ಉಪಬಂಧವನ್ನು ಉಲ್ಲೇಖಿಸದೆ, ದಾಖಲೆಯ ಭಾಗವನ್ನಾಗಿ ಕ್ಲೇಮು ಮಾಡಲು ಬರುವುದಿಲ್ಲ. ಹೀಗಾಗಿ, ಎರಡನೇ ಪ್ರಕರಣದಲ್ಲಿನ ವ್ಯವಹರಣೆಗಳು ತರ್ಕವಿರುದ್ಧ ಮತ್ತು ಕಾನೂನುಬಾಹಿರವಾಗಿವೆ ಹಾಗೂ ರದ್ದುಪಡಿಸಲು ತಕ್ಕುದಾಗಿವೆಯೆಂದು ವಾದಿಸಲಾಗಿದೆ.

3. ಭ್ರಷ್ಟಾಚಾರ ಪ್ರಕರಣದಲ್ಲಿ ಪ್ರಾರಂಭಿಕ ವಿಚಾರಣೆಯು ಅನುಮತೀಯವೆಂದು ಹೇಳಬಹುದಾಗಿದ್ದರೂ ಸಹ, ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುವುದಕ್ಕೆ ಮುಂಚೆಯೇ ಶೋಧನೆ ಮತ್ತು ಅಭಿಗ್ರಹಣ ಹಾಗೂ ಸಾಕ್ಷ್ಯದ ಸಂಗ್ರಹಣೆಯು, ವರದಿಯಾದ ***ಲಲಿತ ಕುಮಾರಿ –ವಿರುದ್ಧ– ಉತ್ತರ ಪ್ರದೇಶ ಸರ್ಕಾರ***[1] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದಿಂದ ವಿಧಿಸಲಾದಂತೆ, ಅದು ಅನುಮತೀಯವಲ್ಲದಿದ್ದಲ್ಲಿ, ಅಪರಾಧ ಸಂಖ್ಯೆ 1/2016ರಲ್ಲಿ ಅಭಿಗ್ರಹಣ ಮಾಡಿದ ಸ್ವತ್ತುಗಳನ್ನು ವರ್ಗಾಯಿಸುವಲ್ಲಿ ಈಗ ಕೈಗೊಳ್ಳಲಾದ ಕ್ರಮವು, ತರುವಾಯ ಅಪರಾಧ ಸಂಖ್ಯೆ 3/2016ರಲ್ಲಿ ದಾಖಲಾದ ಪ್ರಕರಣವನ್ನು ಸಮರ್ಥಿಸಲು, ನೇರವಾಗಿ ಅನುಮತೀಯವಲ್ಲದ್ದನ್ನು ಪರೋಕ್ಷವಾಗಿ ನಡೆಸಲು ಪ್ರಾಸಿಕ್ಯೂಷನನ್ನು ಶಕ್ತಗೊಳಿಸುವುದಕ್ಕೆ ಕಾರಣವಾಗಿದೆ. ಅದರಲ್ಲಿ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸದೆ, ಸಂಜ್ಞೇಯ ಅಪರಾಧಕ್ಕೆ ಸಂಬಂಧಿಸಿ ತನಿಖೆಯನ್ನು ನಿಷೇಧಿಸಿದಲ್ಲಿ, ಒಂದು ಪ್ರಕರಣದಲ್ಲಿ ಅಭಿಗ್ರಹಣ ಮಾಡಿದ ಸ್ವತ್ತುಗಳ ವರ್ಗಾವಣೆಯ ತರುವಾಯ ದಾಖಲಿಸಲಾದ ಪ್ರಕರಣದ ಆಧಾರವು ಸ್ಥಾಪಿತ ಕಾನೂನಿಗೆ ವಿರುದ್ಧವಾಗಿರುವ ಕಾರಣ, ಅದೇ ಮೊದಲಿನ ಪ್ರಕರಣವನ್ನು ಅವಲಂಬಿಸುತ್ತದೆಯೆಂದು ವಾದಿಸಲಾಗಿದೆ.

---

1. ಎಐಆರ್ 2014 ಎಸ್‌ಸಿ 187

***ಲಲಿತ ಕುಮಾರಿ*** ಪ್ರಕರಣದಲ್ಲಿ ನೀಡಲಾದ ವಿನಾಯಿತಿಯಿಂದ ಸಮರ್ಥಿಸಿಕೊಳ್ಳಲು ಶೋಧ ಮತ್ತು ಅಭಿಗ್ರಹಣವನ್ನು ಪ್ರಾರಂಭಿಕ ವಿಚಾರಣೆಯ ಹಂತದಲ್ಲಿರುವುದಾಗಿ ತೋರಿಸಲು ಎಂದಿಗೂ ಸಾಧ್ಯವಿಲ್ಲವೆಂಬುದನ್ನು ಒತ್ತಿ ಹೇಳಲಾಗಿದೆ. ಉದ್ದೇಶಿಸಲಾದ ಪ್ರಾರಂಭಿಕ ವಿಚಾರಣೆಯು ಸಂಜ್ಞೇಯ ಅಪರಾಧವನ್ನು ಎಸಗಲಾಗಿದೆಯೆ? ಮತ್ತು ಇನ್ನೇನೂ ಅಲ್ಲವೇ? ಎಂಬುದನ್ನು ನಿಶ್ಚಿತಪಡಿಸಲು ನಡೆಸಲಾದ ಅಂಥ ವಿಚಾರಣೆಯಾಗಿದೆ.

ಆದುದರಿಂದ ಅರ್ಜಿದಾರರ ಪರ ಮಾನ್ಯ ವಕೀಲರು ಅಪರಾಧ ಸಂಖ್ಯೆ: 3/2016ರಲ್ಲಿ ಪ್ರಕರಣದ ವ್ಯವಹರಣೆಗಳನ್ನು ರದ್ದುಪಡಿಸಲು ಕೋರಿದ್ದಾರೆ.

4. ಇದಕ್ಕೆ ವಿರುದ್ಧವಾಗಿ, ಮಾನ್ಯ ವಿಶೇಷ ಸರ್ಕಾರಿ ವಕೀಲರು, ಅರ್ಜಿದಾರರು ತಪ್ಪು ತಿಳಿದುಕೊಂಡಿದ್ದಾರೆಂದು ವಾದಿಸಿದ್ದಾರೆ. 1ನೇ ಅರ್ಜಿದಾರ ಮತ್ತು ಅವನ ಮಗಳ ಮನೆಯ ಚರಂಡಿ ಕೊಳವೆಯಲ್ಲೂ ಸಹ ಮೌಲ್ಯಯುತ ವಸ್ತುಗಳು ಹಾಗೂ ಹಣದ ದೊಡ್ಡ ರಹಸ್ಯ ಸ್ಥಳದ ಅಭಿಗ್ರಹಣ ಮಾಡಿರುವುದನ್ನು ಸೂಚಿಸಲಾಗಿದೆ. ಅದರಲ್ಲಿ ಕೆಲವು ವಸ್ತುಗಳು ಬೇರೆಯವರಿಗೆ ಸೇರಿದವುಗಳೆಂಬ ಆಧಾರದ ಮೇಲೆ, ಕಾರಣ ಹೇಳಲಾಗದಂತೆ ಅವುಗಳ ಬಿಡುಗಡೆಗಾಗಿ ಕ್ಲೇಮು ಮಾಡಿದ್ದು, ಅದನ್ನು ಆ ಬೇರೆಯವರು ಮಾಡಿಲ್ಲ. ಆದರೆ ಅರ್ಜಿದಾರರು ಸ್ವತಃ ತಾವೇ ಕ್ಲೇಮು ಮಾಡಿದ್ದಾರೆ. ಎರಡನೆಯದಾಗಿ, ತನಿಖೆಯು ಇನ್ನೂ ಪೂರ್ಣಗೊಳ್ಳಬೇಕಿದೆ. ಹೀಗಾಗಿ, ಕೆಳನ್ಯಾಯಾಲಯವು ವಸ್ತುಗಳ ಬಿಡುಗಡೆಗಾಗಿ ಕೋರಿರುವ ಅರ್ಜಿಯನ್ನು ಸರಿಯಾಗಿಯೇ ತಿರಸ್ಕರಿಸಿದೆ.

ಅರ್ಜಿದಾರನ ವಿರುದ್ಧ ಹೂಡಲಾದ ಎರಡನೇ ಪ್ರಕರಣವು ಅಸಿಂಧು ಮತ್ತು ಕಾನೂನು ಬಾಹಿರವಾಗಿದೆಯೆಂಬ ವಾದಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುವ ಮುಂಚೆಯೇ ಶೋಧ ಹಾಗೂ ಅಭಿಗ್ರಹಣವನ್ನು ಮಾಡುವುದು ಅಕ್ರಮವೆಂದು ಅರ್ಥೈಸಬೇಕಾಗಿದ್ದರೂ ಸಹ ತೀರ್ಪುಗಳ ಸರಣಿಯಲ್ಲಿ ವಿಧಿಸಲಾದಂತೆ, ಅದು ವ್ಯವಹರಣೆಗಳನ್ನು ನಿರರ್ಥಕಗೊಳಿಸುವುದಿಲ್ಲವೆಂದು

ಒತ್ತಿ ಹೇಳಲಾಗಿದೆ ಮತ್ತು ಹೀಗಾಗಿ ಮಂಡಿಸಲಾದ ಪ್ರಾಥಮಿಕ ಕಾರಣವು ಸಮರ್ಥನೀಯವಾಗಿಲ್ಲವೆಂದು ವಾದಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ, 1973ರ 218ನೇ ಪ್ರಕರಣದೆಡೆಗೆ ಗಮನ ಸೆಳೆಯಲಾಗಿದ್ದು, ಅದು ಯಾರೇ ವ್ಯಕ್ತಿ ಆಪಾದಿತನಾಗಿರುವ ಪ್ರತಿಯೊಂದು ನಿರ್ದಿಷ್ಟ ಅಪರಾಧಕ್ಕಾಗಿ ಪ್ರತ್ಯೇಕ ಆರೋಪವಿರತಕ್ಕದ್ದು ಹಾಗೂ ಅಂಥ ಪ್ರತಿಯೊಂದು ಆರೋಪಕ್ಕಾಗಿ ಪ್ರತ್ಯೇಕವಾಗಿ ಅಧಿವಿಚಾರಣೆ ನಡೆಸತಕ್ಕದ್ದು ಎಂದು ಉಪಬಂಧಿಸುತ್ತದೆ. ಆಪಾದಿತನು ಆರೋಪಗಳನ್ನು ಒಟ್ಟಿಗೆ ಅಧಿವಿಚಾರಿಸಲು ಕೋರಿದ್ದಲ್ಲಿ ಅಥವಾ ಮ್ಯಾಜಿಸ್ಟ್ರೇಟರು ಆಪಾದಿತನಿಗೆ ಯಾವುದೇ ಬಾಧಕವಾಗದಿರಲೆಂಬ ಅಭಿಪ್ರಾಯ ಹೊಂದಿದ್ದಲ್ಲಿ ಹೊರತುಪಡಿಸಿ, ಅಪರಾಧಗಳನ್ನು ಹಾಗೆ ಒಟ್ಟಿಗೆ ಅಧಿವಿಚಾರಿಸಲು ನಿರ್ಧರಿಸಬಹುದು. ಆದ್ದರಿಂದ ಅರ್ಜಿದಾರನು ಕೆಳ ನ್ಯಾಯಾಲಯದ ಮುಂದೆ ತನ್ನ ಪರಿಹಾರಗಳನ್ನು ಪಡೆದುಕೊಳ್ಳುವುದು ಅವನಿಗೇ ಸೇರಿದ್ದೆಂದು ವಾದಿಸಲಾಗಿದೆ.

ಬೇರೆ ಬೇರೆ ಸ್ವರೂಪದ ಅಪರಾಧಗಳಿಗೆ ಎರಡು ಪ್ರತ್ಯೇಕ ಮೊಕದ್ದಮೆಗಳನ್ನು ದಾಖಲಿಸಲಾಗಿದ್ದು, ಸಾಕ್ಷ್ಯವನ್ನು ಸಹ ಬೇರೆ ಬೇರೆ ಸಾಕ್ಷಿದಾರರ ಮುಖಾಂತರ ನೀಡಲಾಗಿದ್ದು, ಎರಡು ಮೊಕದ್ದಮೆಗಳು ಹೊಂದಾಣಿಕೆಯಾಗದಿರುವ ಕಾರಣ ಅದು ಬಹಳ ನಿಧಾನವಾದ ಕಾರ್ಯವಿಧಾನಕ್ಕೆ ಕಾರಣವಾಗುತ್ತದೆ ಮತ್ತು ವ್ಯಾವಹಾರಿಕ ತೊಂದರೆಗಳ ಕಾರಣಕ್ಕಾಗಿ ಅವುಗಳನ್ನು ಒಟ್ಟಿಗೆ ಅಧಿವಿಚಾರಣೆ ನಡೆಸಲಾಗದು. ಹೀಗಾಗಿ ಮಾನ್ಯ ವಕೀಲರು ಈ ಅರ್ಜಿಗಳನ್ನು ವಜಾಗೊಳಿಸಲು ಕೋರಿರುತ್ತಾರೆ.

5. ಈ ಮೇಲಿನ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಹಾಗೂ ಪರಸ್ಪರ ವಿರೋಧದ ವಾದಗಳನ್ನು ಪರಿಶೀಲಿಸಿದ ಮೇಲೆ, ಕ್ರಿಮಿನಲ್ ಪರಿಷ್ಕರಣಾ ಅರ್ಜಿ ಸಂಖ್ಯೆ 1227/2016ರಲ್ಲಿ ಅರ್ಜಿಗೆ ಸಂಬಂಧಪಡುವಷ್ಟರಮಟ್ಟಿಗೆ, ಕೆಳನ್ಯಾಯಾಲಯವು ಅರ್ಜಿದಾರರ ಅರ್ಜಿಯನ್ನು ಎರಡು ಕಾರಣಗಳಿಗಾಗಿ ತಿರಸ್ಕರಿಸಿದೆ. ಎಂದರೆ, ಸ್ವತ್ತಿನ ಕೆಲವು ಬಾಬ್ತುಗಳು ಯಾರಿಗೆ ಸೇರಿವೆಯೋ ಅವರು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಎರಡನೆಯದಾಗಿ, ವಿಷಯವು ಇನ್ನೂ ತನಿಖೆಯಲ್ಲಿದೆ ಮತ್ತು

ಅರ್ಜಿಯು ಅವಧಿಪೂರ್ವದ್ದಾಗಿರುತ್ತದೆ. ತನಿಖೆಯ ಮುಕ್ತಾಯದ ನಂತರ ಯುಕ್ತ ಸಮಯದಲ್ಲಿ ಯುಕ್ತ ಪರಿಹಾರವನ್ನು ಕೋರಿ ಅರ್ಜಿದಾರರು ಕೆಳನ್ಯಾಯಾಲಯದ ಮುಂದೆ, ಸಾಧ್ಯವಿದ್ದಲ್ಲಿ ಸ್ವತ್ತಿನ ಕೆಲ ಬಾಬ್ತುಗಳ ಇತರ ಮಾಲೀಕರೊಂದಿಗೆ, ಮತ್ತೊಂದು ಅರ್ಜಿಯನ್ನು ಸಲ್ಲಿಸುವುದಕ್ಕೆ ಅಡ್ಡಿಪಡಿಸಿಲ್ಲವೆಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿದೆ.

6. ಈ ಅರ್ಜಿಗಳಲ್ಲಿ ಎರಡನೇ ಅರ್ಜಿಗೆ ಸಂಬಂಧಪಡುವಷ್ಟರಮಟ್ಟಿಗೆ, ಅಪರಾಧ ಸಂಖ್ಯೆ 1/2016ರಲ್ಲಿನ ಮೊದಲನೇ ಮೊಕದ್ದಮೆಯಲ್ಲಿ ಹೆಚ್ಚಿನ ತನಿಖೆಯನ್ನು ಅನುಸರಿಸಿ ಮಾಡಲಾದ ಶೋಧ ಮತ್ತು ಅಭಿಗ್ರಹಣವು ಅಪರಾಧ ಸಂಖ್ಯೆ: 3/2016ರಲ್ಲಿ ತರುವಾಯ ದಾಖಲಿಸಲಾದ ಮೊಕದ್ದಮೆಯಲ್ಲಿ ಎಫ್ಐಆರ್‌ಗೆ ತಳಹದಿಯನ್ನು ರೂಪಿಸುವುದೆ? ಎಂಬ ಬಗೆಗಿನ ಪ್ರಾಥಮಿಕ ವಾದವು ನಿಶ್ಚಿತವಾಗಿ ನಕಾರಾತ್ಮಕ ಉತ್ತರ ನೀಡುವಂಥದ್ದಾಗಿದೆ. ***ಲಲಿತ ಕುಮಾರಿ*** ಪ್ರಕರಣದಲ್ಲಿ ವಿಧಿಸಲಾದ ಕಾನೂನಿನ ಬೆಳಕಿನಲ್ಲಿ, ಎಫ್ಐಆರ್‌ಗೆ ಮುಂಚೆಯೇ ಮಾಡಲಾದ ಇಂಥ ಶೋಧ ಮತ್ತು ಅಭಿಗ್ರಹಣವು ಅಕ್ರಮವಾಗಿರುವುದು ಮಾತ್ರವಲ್ಲದೆ, ಅದು ಕಾನೂನುಬಾಹಿರವಾಗಿದೆ ಹಾಗೂ ಅನುಮತೀಯವಲ್ಲದ್ದಾಗಿದೆ.

ಹಾಗಿದ್ದರೂ, ನಡೆಸಲಾದ ಎರಡನೇ ಶೋಧ ಮತ್ತು ಅಭಿಗ್ರಹಣದಲ್ಲಿ ಸಂಗ್ರಹಿಸಿದ ತರುವಾಯದ ಸಾಕ್ಷ್ಯಾಧಾರಗಳು ಹಾಗೂ ಅರ್ಜಿದಾರನ ವಿರುದ್ಧ ಮಂಡಿಸಲಾದ ಪ್ರತ್ಯೇಕ ಅಪರಾಧವು ಅರ್ಜಿದಾರನೊಬ್ಬನ ವಿರುದ್ಧವಾಗಿದ್ದರೂ, ಅನುಕೂಲಕರವಾಗಿ ಹೆಚ್ಚುವರಿ ಆರೋಪಪಟ್ಟಿಯ ವಸ್ತು ವಿಷಯವಾಗಿರಬಹುದಾಗಿತ್ತು. ಅನಾನುಕೂಲತೆ ಅಥವಾ ಅಸಮರ್ಪಕತೆಯ ವಾದವು ಏನೇ ಒಳಗೊಂಡಿದ್ದರೂ, ಎರಡು ಮೊಕದ್ದಮೆಗಳ ಹೊಂದಾಣಿಕೆಯ ಮತ್ತು ಯುಕ್ತ ಆರೋಪಗಳನ್ನು ರೂಪಿಸುವ ಕಾರ್ಯವು ಅಸಾಧ್ಯವಾದುದೇನಲ್ಲ ಹಾಗೂ ಎರಡು ಅಧಿವಿಚಾರಣೆಗಳನ್ನು ಎದುರಿಸಬೇಕಾಗಿರುವಲ್ಲಿ ಅರ್ಜಿದಾರನ ಹಿತಾಸಕ್ತಿಗೆ ಖಂಡಿತ ಬಾಧಕವಾಗುವುದರಿಂದ, ಪ್ರಾಸಿಕ್ಯೂಷನ್ ಈ ಸಂಬಂಧ ಯುಕ್ತ, ದೋಷಪರಿಹಾರಕ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ.

ತದನುಸಾರವಾಗಿ, ಈ ಅರ್ಜಿಗಳಲ್ಲಿ ಎರಡನೇ ಅರ್ಜಿಯಾದ ಕ್ರಿಮಿನಲ್ ಪರಿಷ್ಕರಣಾ ಅರ್ಜಿ ಸಂಖ್ಯೆ 6883/2016ನ್ನು ಪುರಸ್ಕರಿಸಲಾಗಿದೆ ಮತ್ತು ತುಮಕೂರಿನ IIನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯದ ಮುಂದೆ, ಅರ್ಜಿದಾರನ ವಿರುದ್ಧ ಹೂಡಲಾದ ಅಪರಾಧ ಸಂಖ್ಯೆ 3/2016ರಲ್ಲಿನ ವ್ಯವಹರಣೆಗಳನ್ನು ರದ್ದುಪಡಿಸಲಾಗಿದೆ. ಹಾಗಿದ್ದರೂ, ಪ್ರತ್ಯರ್ಜಿದಾರನಿಗೆ ಕಾನೂನಿನ ಅನುಸಾರವಾಗಿ ಹಾಗೂ ಕೆಳನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಯುಕ್ತ ಕ್ರಮಗಳನ್ನು ಕೈಗೊಳ್ಳುವುದರಿಂದ ಅಡ್ಡಿಪಡಿಸಿರುವುದಿಲ್ಲ.